**Sri A. V. NARASIMHA REDDY.**— But it is not that answer or the idea implied in it that is required in this matter. To introduce Bhoodan movement on the one hand for the introduction of craft education in institutions, and on the other to state that the new educational reforms are being introduced to give the boys in these institutions craft education and just at the seasons giving them vacation, will it not be self-contradictory?

**Sri A. G. RAMACHANDRA RAO.**— One point I wish to answer, Sir. The basic system is meant to introduce craft in the school and make the school self-supporting. On that basis we are proceeding.

---

## High School Building for Santhebachaahlli.

*Q.*—367. **Sri S. M. LINGAPPA** (Krishnarajapet).—

Will the Government be pleased to state:—

(*a*) whether they have received any representation from the people of Santhebachahalli Village in Krishnarajapet Taluk for the immediate construction of High School building;

(*b*) if so, the action taken by them?

*A.*—**Sri A. G. RAMACHANDRA RAO** (Minister for Law and Education).—

(*a*) Yes.

(*b*) Plan and estimate for the construction of the High School building is under scrutiny by the Chief Engineer.

ಶ್ರೀ ಎಸ್. ಎಂ. ಲಿಂಗಪ್ಪ.—ಪ್ಲಾನು ಮತ್ತು ಎಸ್ಟಿಮೇಟು ತಯಾರಾಗಿದೆಯೆಂದು ತಿಳಿಸಿದ್ದೀರಿ. ಇವು ಯಾವಾಗ ತಯಾರಾಗಿವೆ.

***Sri A. G. RAMACHANDRA RAO.**— Very recently.

KARNATAKA LEGISLATURE LIBRARY. RESEARCH SECTION ಕರ್ನಾಟಕ ವಿಧಾನಮಂಡಲದ ಗ್ರಂಥಾಲಯ

ಶ್ರೀ ಎಸ್. ಎಂ. ಲಿಂಗಪ್ಪ.—ಇದರ ಅಂದಾಜಿನ ಮೊಬಲಗು ಎಷ್ಟು?

ಶ್ರೀ ಎ. ಜಿ. ರಾಮಚಂದ್ರರಾವ್.—ಅಮೇಲೆ ನೋಡಿ ತಮಗೆ ಹೇಳುತ್ತೇನೆ.

ಶ್ರೀ ಕೆ. ಲಕ್ಕಪ್ಪ (ಚನ್ನರಾಯಪಟ್ಟಣ).—ಈ ಹೈಸ್ಕೂಲಿನ ಕಟ್ಟಡದ ಬಗ್ಗೆ ಸ್ಥಳೀಯ ಜನಗಳೂ ಮತ್ತು ಜಿಲ್ಲಾಬೋರ್ಡಿನವರೂ ತಾವು ಕೊಡಬೇಕಾದ Contributionನನ್ನು ಕೊಟ್ಟಿದ್ದಾರಲ್ಲವೇ?

**Sri A. G. RAMACHANDRA RAO.**— Yes.

---

ಶ್ರೀ ಎಚ್. ಕೆ. ಸಿದ್ದಯ್ಯ (ಬೇಲೂರು—ಅನುಸೂಚಿತ ಜಾತಿಗಳು).—ನನ್ನ ಪ್ರಶ್ನೆಗೆ (ನಂ. 62) ಕನ್ನಡದಲ್ಲಿ ಉತ್ತರ ಒದಗಿಸಿಲ್ಲ. ನನಗೆ ಇಂಗ್ಲಿಷನ್ನು ಓದಿ ಅರ್ಥಮಾಡಿಕೊಳ್ಳುವುದಕ್ಕಾಗುವುದಿಲ್ಲ. ಆದ್ದರಿಂದ ತಾವು ದಯವಿಟ್ಟು ಈ ಪ್ರಶ್ನೆಗೆ ಕನ್ನಡದಲ್ಲಿ ಉತ್ತರ ಒದಗುವಂತೆ ಮಾಡಿ ನಾಳೆ ಈ ಪ್ರಶ್ನೆಯನ್ನು ತಗೆದು ಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ಆಗಬಹುದು.

---

## Water Works Improvement in Cities and Major Towns.

*Q.*—76. **Sri S. R. NAGAPPA SETTY** (Shimoga).—

Will the Government be pleased to state:—

The amounts sanctioned and spent for the following Cities and Town Municipalities under the Water Works Improvements as grants and loans from 1952-53 to 1955-56 September end (yearwar details may be furnished);

(*i*) for Bangalore City;
(*ii*) Mysore City;
(*iii*) for Kolar Gold Fields, Tumkur, Kolar, Mandya, Hassan, Chickmagalur, Shimoga, Chitaldrug and Bellary?

*A.*—**Sri T. CHANNIAH** (Minister for Public Health and Local Self-Government).—

For Statement (See the Appendix below).

Statement showing the amount of loan and grant sanctioned and spent for Water Supply Improvement Works

| Name of the Municipality | 1952-53 | | | 1953-54 | | | 1954-55 | | | 1955-56 (Septr. end). | | |
|---|---|---|---|---|---|---|---|---|---|---|---|---|
| | Amount sanctioned | | Amount spent | Amount sanctioned | | Amount spent | Amount sanctioned | | Amount spent | Amount sanctioned | | Amount spent |
| | Grant | Loan | | Grant | Loan | | Grant | Loan | | Grant | Loan | |
| | Rs. | Rs. | Rs. | Rs. | Rs. | Rs. | Rs. | Rs. | Rs. | Rs. | Rs. | Rs. |
| 1. Bangalore City ... | ... | ... | ... | ... | ... | ... | ... | ... | ... | ... | ... | ... |
| 2. Mysore City ... | ... | ... | ... | ... | ... | ... | ... | 3,69,000 | 3,69,300 | ... | 2,35,000 | 2,35,000 |
| 3. K. G. F. Sanitary Board. | ... | ... | ... | ... | ... | ... | ... | ... | ... | ... | ... | ... |
| 4. Tumkur ... | ... | ... | ... | ... | ... | ... | .. | ... | ... | ... | ... | ... |
| 5. Kolar ... | 50,625 | 50,000 | ... | ... | ... | 49,000 | 73,000 | 50,000 | 10,000 | ... | 66,000 | 10,000 |
| 6. Mandya ... | ... | 2,68,750 | ... | ... | ... | 33,000 | ... | 96,000 | 1,29,000 | ... | 2,89,000 | 89,000 |
| 7. Hassan ... | ... | 2,11,875 | .. | ... | ... | 56,000 | ... | 1,05,000 | 2,70,000 | ... | 3,07,000 | 63,000 |
| 8. Chickmagalur ... | ... | 2,21,508 | ... | ... | ... | ... | ... | 57,000 | 24,000 | ... | 57,000 | 10,000 |
| 9. Shimoga ... | 50,000 | 1,73,515 | ... | ... | ... | 1,42,000 | ... | 2,00,000 | 1,04,000 | ... | 3,00,000 | 69,000 |
| 10. Chitaldrug ... | ... | 1,00,750 | ... | ... | ... | ... | ... | 40,000 | 21,000 | ... | 1,21,000 | 98,000 |
| 11. Bellary ... | ... | ... | ... | ... | ... | ... | 11,000 | 1,34,300 | ... | ... | ... | 11,000 |

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—1952-53 ನೆಯ ಸಾಲಿನಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟಿಗೆ 50,000 ರೂಪಾಯಿಗಳ ಗ್ರಾಂಟನ್ನೂ, 1,73,515 ರೂಪಾಯಿಗಳ ಸಾಲವನ್ನೂ ಕೊಟ್ಟಿರುವುದಾಗಿ ತಿಳಿಸಿದ್ದೀರಿ. ಆ ಹಣ ಆ ವರ್ಷ ಖರ್ಚಾಗಲಿಲ್ಲ. ಮುಂದಿನ ವರ್ಷ 1,42,000 ರೂಪಾಯಿಗಳನ್ನು ಖರ್ಚುಮಾಡಿರುವುದಾಗಿ ತಿಳಿಸಿದ್ದೀರಿ. ಈ ಖರ್ಚುಮಾಡಿರುವ ಹಣದಲ್ಲಿ 1952-53ರಲ್ಲಿ ಕೊಟ್ಟಿದ್ದ 50,000 ರೂಪಾಯಿಗಳ ಸಾಲವೂ ಸೇರಿದೆಯೇ? ಅಥವಾ ಬರೀ ಸಾಲವನ್ನೇ ಖರ್ಚಿಗಾಗಿ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಆ ಸಾಲನಲ್ಲಿ ಖರ್ಚುಮಾಡಿರತಕ್ಕ ಹಣವನ್ನು ಕೊಟ್ಟಿದೆ. ಬಾಕಿ ಉಳಿದ ಹಣವನ್ನು ಮುಂದಿನ ಸಾಲನಲ್ಲಿ ಖರ್ಚುಮಾಡರಾಗುತ್ತದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—50,000 ರೂಪಾಯಿಗಳನ್ನು ಗ್ರಾಂಟಾಗಿ ಕೊಟ್ಟಿದ್ದೀರಲ್ಲಾ, ಅದನ್ನೂ ಮುನಿಸಿಪಾಲಿಟಿಯವರು ಖರ್ಚುಮಾಡಿದ್ದಾರೆಯೇ ಆ ಹಣವನ್ನು ಮುನಿಸಿಪಾಲಿಟಿಯವರಿಗೆ ಖರ್ಚಿಗಾಗಿ ಕೊಟ್ಟಿದ್ದೀರಾ?

ಶ್ರೀ ಟಿ. ಚನ್ನಯ್ಯ.—ಕೊಟ್ಟಿದೆ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಹಾಗಾದರೆ ಖರ್ಚುಮಾಡಿಯೇ ಇಲ್ಲವಲ್ಲ. "Amount spent" ಎಂಬ ಕಲಮಿನಲ್ಲಿ ನೋಡಿದರೆ ಆ ಹಣವನ್ನು ಖರ್ಚುಮಾಡಿರುವಂತೆ ಕಾಣುವುದಿಲ್ಲವಲ್ಲ.

ಶ್ರೀ ಟಿ. ಚನ್ನಯ್ಯ.—ಸಾಮಾನುಗಳು ಒದಗದಿರುವುದೇ ಮುಂತಾದ ಕೆಲವು ಕಾರಣಗಳಿಂದ ಹಣವನ್ನು ಖರ್ಚುಮಾಡಿಲ್ಲ. ಆದರೆ ಅದೇ ಹಣವನ್ನು ಮುಂದಿನ ಸಾಲನಲ್ಲಿ ಖರ್ಚುಮಾಡಬೇಕೆಂಬುದೇ ಸರ್ಕಾರದ ಉದ್ದೇಶ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಆದರೆ ಮುಂದಿನ ಸಾಲನಲ್ಲಿ ನೋಡುವುದಾದರೆ 1,42,000 ರೂಪಾಯಿಗಳನ್ನು ಮಾತ್ರ ಖರ್ಚುಮಾಡಿರುವುದಾಗಿ ಗೊತ್ತಾಗುತ್ತದೆ. ಅಲ್ಲಿಗೆ ಹಿಂದಿನ ಸಾಲನಲ್ಲಿ ಕೊಟ್ಟಿದ್ದ 50,000 ರೂಪಾಯಿಗಳ ಗ್ರಾಂಟು ಕೊಟ್ಟಿತ್ತೇ?

ಶ್ರೀ ಟಿ. ಚನ್ನಯ್ಯ.—ಹಣವನ್ನು ಮಂಜೂರುಮಾಡಿದ್ದರೂ ಅವರು ಹಣ ಖರ್ಚುಮಾಡಿಲ್ಲ.

ಶ್ರೀ ಎಸ್. ಆರ್. ನಾಗಪ್ಪಶೆಟ್ಟಿ.—ಗ್ರಾಂಟ್ ಹಣವನ್ನು ಕೊಡದೆಯೇ ಸಾಲವನ್ನು ಮಾತ್ರ ತೆಗೆದು ಕೊಳ್ಳಬೇಕೆಂದು ಹೇಳಿದ್ದೀರಿ ಅಲ್ಲವೆ?

ಶ್ರೀ ಟಿ. ಚನ್ನಯ್ಯ.—ಇಲ್ಲ; ಗ್ರಾಂಟ್ ಹಣವನ್ನು ಕೊಡರಾಗಿದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—195-455ನೆ ಸಾಲನಲ್ಲಿ ಬಳ್ಳಾರಿ ಡಿಸ್ಟ್ರಿಕ್ಟಿಗೆ 11,000 ರೂಪಾಯಿಗಳ ಗ್ರಾಂಟನ್ನೂ, 1 ಲಕ್ಷ 34 ಸಾವಿರ ರೂಪಾಯಿಗಳ ಸಾಲವನ್ನೂ ಕೊಟ್ಟಿರುವುದಾಗಿ ತಿಳಿಸಿದ್ದೀರಿ. ಆದರೆ ಆ ವರ್ಷ ಖರ್ಚುಮಾಡಿಲ್ಲ. ಮುಂದಿನ ವರ್ಷ ಗ್ರಾಂಟಾಗಿ ಕೊಟ್ಟಿರುವ 11,000 ರೂಪಾಯಿಗಳನ್ನು ಖರ್ಚುಮಾಡಿರುವ ಹಾಗೆ ಕಂಡುಬರುತ್ತದೆ. ಆದರೆ ಸಾಲವಾಗಿ ಕೊಟ್ಟಿದ್ದ ಮೊಬಲಗನ್ನೇಕೆ ತಾವು renew ಮಾಡಿಲ್ಲ?

ಶ್ರೀ ಟಿ. ಚನ್ನಯ್ಯ.—ಒಂದು ಸಾರಿ ಸಾಲವಾಗಿ ಕೊಟ್ಟಿದ್ದಮೇಲೆ ಅದನ್ನು renew ಮಾಡಬೇಕಾಗಿಲ್ಲ. ಅದೇ account ಮುಂದುವರಿಯುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಾದರೆ ಅವರ ಅಕೌಂಟಿನಲ್ಲಿ 1954-55ರಲ್ಲಿ ಹಣವಿಹೆ ಯೆಂದೇಕೆ ತೋರಿಸಲಿಲ್ಲ?

ಶ್ರೀ ಟಿ. ಚನ್ನಯ್ಯ.—ಅದನ್ನೇನೂ ತೋರಿಸಬೇಕಾಗಿಲ್ಲ. ಅವರ ಅಕೌಂಟಿನಲ್ಲಿ ಅದು ಇದ್ದೇ ಇರುತ್ತದೆ. ಅದನ್ನವರು ಖರ್ಚುಮಾಡಬಹುದು.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗಾದರೇಕೆ ಅವರು ಖರ್ಚುಮಾಡಿಲ್ಲ?

ಶ್ರೀ ಟಿ. ಚನ್ನಯ್ಯ.—ಬಹುಶಃ ಸಾಮಾನುಗಳು ಸಕಾಲಕ್ಕೆ ಒದಗಲಿಲ್ಲವೆಂದು ಕಾಣುತ್ತದೆ.

ಶ್ರೀ ಬಿ. ವಿ. ನಾರಾಯಣರೆಡ್ಡಿ.—ಹಾಗೋ ಅಥವಾ ಸರ್ಕಾರದವರು ಕಿರುಕುಳ ಕೊಟ್ಟರೋ?

ಶ್ರೀ ಟಿ. ಚನ್ನಯ್ಯ.—ಸರ್ಕಾರದವರಿಗೆ ಆ ಉದ್ದೇಶವೇನೂ ಇಲ್ಲ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಗ್ರಾಂಟುಗಳನ್ನು ಕೊಡುವುದರಲ್ಲಿ ಇಲ್ಲಿ ಕೊಟ್ಟಿರುವ 11 ಮುನಿಸಿಪಾಲಿಟಿಗಳ ಪೈಕಿ ಕೋಲಾರ ಮತ್ತು ಶಿವಮೊಗ್ಗ, ಈ ಎರಡು ಮುನಿಸಿಪಾಲಿಟಿಗಳಿಗೆ ಮಾತ್ರ ಕೊಟ್ಟು ಮಿಕ್ಕದ್ದಕ್ಕೆ ಏನೂ ಕೊಡದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಆ ಮುನಿಸಿಪಾಲಿಟಿಗಳಿಗೆ ವರಮಾನ ಕಡಮೆಯಿದೆಯೆಂದು ಹೇಳಿಕೊಟ್ಟಿದೆ.

ಶ್ರೀ ಬಿ. ಹುಚ್ಚೇಗೌಡ.—ಹಾಗಾದರೆ ಕೋಲಾರ, ಶಿವಮೊಗ್ಗ ಟೌನ್‌ಗಳಿಗೆ ಬಿಟ್ಟು ಉಳಿವಕ್ಕೆ ವರಮಾನ ಚೆನ್ನಾಗಿದೆಯೇ?

ಶ್ರೀ ಟಿ. ಚನ್ನಯ್ಯ.—ಆ ಮುನಿಸಿಪಾಲಿಟಿಯವರು ಕೊಡಿ ಎಂದು ಕೇಳಿದ್ದರ ಮೇರೆ ಕೊಟ್ಟೆವು.

ಶ್ರೀ ಬಿ. ಹುಚ್ಚೇಗೌಡ.—ಬಾಕಿಯವರು ಕೇಳಿರಲಿಲ್ಲವೇ? ಒಂದು ಡಿಸ್ಟ್ರಿಕ್ಟಿಗೆ ಮಾತ್ರ ಕೊಟ್ಟು ಮಿಕ್ಕವುಗಳಿಗೆ ಕೊಡದಿರುವುದಕ್ಕೆ ಕಾರಣವೇನು? ಆ ರೀತಿ discrimination ಮಾಡಬಹುದೆ?

ಶ್ರೀ ಟಿ. ಚನ್ನಯ್ಯ.—Discrimination ಮಾಡಿಲ್ಲ ಎಷ್ಟು ಹಣವಿತ್ತೋ ಅಷ್ಟನ್ನು ಕೊಟ್ಟುಮಿಕ್ಕವರಿಗೆ ಸಾಲವಾಗಿ ಹಣ ಕೊಟ್ಟಿದ್ದೇವೆ.

ಶ್ರೀ ಬಿ. ಹುಚ್ಚೇಗೌಡ.—ಇರುವುದನ್ನೇ ಎಲ್ಲರಿಗೂ ಹಂಚಬಹುದಾಗಿತ್ತಲ್ಲವೇ?

ಶ್ರೀ ಟಿ. ಚನ್ನಯ್ಯ.—ಯಾವಯಾವ ಮುನಿಸಿಪಾಲಿಟಿಗಳಿಂದ ಮೊದಲು ಕೊಡಬೇಕೆಂದು ಹೇಳಿ ಮನವಿ ಬಂತೋ ಅವರಿಗೆ ಕೊಟ್ಟಿದ್ದೇವೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ—ಅನುಸೂಚಿತ ಜಾತಿಗಳು).—1955-56ರಲ್ಲಿ ತಾವು 2,35,000 ರೂಪಾಯಿಗಳನ್ನು ಕೊಟ್ಟಿದ್ದೀರಲ್ಲಾ, ಈ ಸ್ಕೀಮಿನಲ್ಲಿ ಬೆಂಗಳೂರು ಸಿಟಿಯ ರಾಜಾಜಿಯ ನಗರ ಮತ್ತು ಜಯನಗರಗಳಿಗೆ ನೀರು ಸರಬರಾಯಿ ಮಾಡುವುದೂ ಸೇರಿದೆಯೇ?

ಶ್ರೀ ಟಿ. ಚನ್ನಯ್ಯ.—ಬೆಂಗಳೂರು ಸಿಟಿಗೆ ಹಣ ಕೊಟ್ಟೇ ಇಲ್ಲ.

ಶ್ರೀ ಬಿ. ರಾಚಯ್ಯ (ಯಳಂದೂರು—ಅನುಸೂಚಿತ ಜಾತಿಗಳು).—ಕೋಲಾರ ಡಿಸ್ಟ್ರಿಕ್ಟಿಗೆ ಮಾತ್ರ ಗ್ರಾಂಟ್ ಕೊಟ್ಟಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಉತ್ತರ ಕೊಟ್ಟಿದ್ದೇನೆ.

ಶ್ರೀ ಬಿ. ರಾಚಯ್ಯ.—ಬೇರೆಯವರು ಗ್ರಾಂಟ್ ಕೊಡಬೇಕೆಂದು ಕೇಳಿರಲಿಲ್ಲವೇ?

**Mr. SPEAKER.**—That question has been answered.